# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

## ನವನಗರ, ಹುಬ್ಬಳ್ಳಿ–580 025

ಉಲ್ಲೇಖ ಸಂಖ್ಯೆ ಃ ಕರಾಕಾವಿ/ಬೋ.ಕೇ/ಸಿಬ್ಬಂದಿ/ನೇಮಕಾತಿ/2012–13/2 ದಿನಾಂಕ ಃ19–06–2012

## ಅಧಿಸೂಚನೆ

**ವಿಷಯ :** ಬೋಧಕೇತರ ಹುದ್ದೆಗಳ ನೇಮಕಾತಿ ಕುರಿತು.

~~~\*~~~~\*~~~

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಈ ಕೆಳಕಂಡ ಖಾಯಂ ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಲು ಕರ್ನಾಟಕದ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ (ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ (http://www.kslu.ac.in) ಅರ್ಜಿಯನ್ನು ಪಡೆದು ವಿವರಗಳನ್ನು ಭರ್ತಿ ಮಾಡಿ **8** ಪ್ರತಿಗಳಲ್ಲಿ ಸಲ್ಲಿಸುವುದು.)

**I ) ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : 20/07/2012.**

| ಕ್ರ. ಸಂ | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ (ರೂ.ಗಳಲ್ಲಿ) | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಮೀಸಲಾತಿ |
|---|---|---|---|---|
| 01 | **ಕಛೇರಿ ಅಧೀಕ್ಷಕರು**<br>Office Superintendent<br>22800 – 43200 | Degree of a recognised university. | **04** | **SC- 01**- (Open)<br>**ST-01** – (Open)<br>**GM-01** – (Open)<br>**GM -01** –(Woman) |
| 02 | **ಶೀಘ್ರಲಿಪಿಗಾರರು**<br>Stenographer<br>17650 – 32000 | 1. A pass in SSLC examination or an equivalent qualification.<br>2. Senior type-writing & senior shorthand examination conducted by the Dept. of Public instruction or should be holder of Diploma in secretarial practice with shorthand typewriting as optional (Elective subjects) granted by the Board of Technical Education in Karnataka or should posses an equivalent qualification from any other Board. | **07** | **SC-01** (Open)<br>**ST- 01** (Open)<br>**Cat-I -01** (Open)<br>**Cat-IIA – 01** (Open)<br>**GM – 03** (Open-01, Woman-01, Rural-01) |
| 03 | **ಸಹಾಯಕರು**<br>Assistants<br>16000 – 29600 | A Degree from any recognised university. | **15** | **SC- 03** (Open - 01, Woman-01, Rural-01)<br>**ST- 01** (Open)<br>**Cat-I - 01** (Open)<br>**Cat-IIA- 02** (Open-01, Woman-01)<br>**IIB- 01** - (Open)<br>**GM- 07**-[Open-02, Women-02, Rural-02, PH-1(Hearing impaired)] |
| 04 | **ಕಿರಿಯ ಸಹಾಯಕರು**<br>Junior Assistants<br>11600 – 21000 | A Pass in S.S.L.C. or equivalent examination | **30** | **SC- 05** (Open-01, Women-02, Rural-01, PH-Leprosy cured-01,)<br>**ST-01** (Open)<br>**Cat-I-01** – (Open)<br>**Cat-IIA- 05** (Open-01, Woman-02, Rural-01, PH-01 Mentally ill)<br>**Cat-IIB -01** (Open)<br>**Cat-IIIA -01** (Open)<br>**Cat-III B- 01** (Open)<br>**GM- 15** (Open-03, Women-05, Rural-04, PH -01 |
~~~

| | | | | Locomotors Disability, Kannada-01, Ex.Ser. -01) |
|---|---|---|---|---|
| 05 | **ವಾಹನ ಚಾಲಕರು**<br>Driver<br>11600 – 21000 | A pass in 7th standard or equivalent examination. Must be a holder of current driving license of light motor vehicle. | **04** | **SC-01** (Open)<br>**ST -01** (Open)<br>**GM-02** (Open-01, Woman-01) |
| | **ಒಟ್ಟು ಹುದ್ದೆಗಳು** | | **60** | |

**II) ಆಯ್ಕೆ ವಿಧಾನ :** ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಆಯಾ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ಹಾಗೂ ಸಂದರ್ಶನದಲ್ಲಿನ ಸಾಮರ್ಥ್ಯಕ್ಕೆ (Performance in the interview) ಅನುಗುಣವಾಗಿ ಸಂಬಂಧಪಟ್ಟ ನೇಮಕಾತಿ ಮಂಡಳಿಯು ಸಂದರ್ಶನ ಮೂಲಕ ಆಯ್ಕೆ ಮಾಡಲಾಗುವದು. ಕ.ರಾ.ಕಾ.ವಿ.ದಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಹಾಗೂ ಸೇವಾನುಭವ ಹೊಂದಿದ ಅರ್ಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**III) ವಯೋಮಿತಿ :** ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಂದು ಅಭ್ಯರ್ಥಿಯು

| | |
|---|---|
| **(ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರಬೇಕು** | **(ಆ) ಗರಿಷ್ಟ ವಯೋಮಿತಿ :**<br>**(I) ಸಾಮಾನ್ಯ ವರ್ಗ – 35 ವರ್ಷ (II) ಇತರೆ ಹಿಂದುಳಿದ ವರ್ಗ – 38 ವರ್ಷ**<br>**(III) ಪ.ಜಾತಿ / ಪ.ಪಂ / ಪ್ರವರ್ಗ – 1 – 40 ವರ್ಷ** |

**IV) ವಿದ್ಯಾರ್ಹತೆ**

1) ಮೇಲೆ ನಮೂದಿಸಿರುವ ಪದವಿಗಳನ್ನು ಹೊರತು ಪಡಿಸಿ ಇತರೆ ಯಾವುದೇ ಪದವಿ/ತಾಂತ್ರಿಕ ಪದವಿಗಳನ್ನು/ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂಥ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2) ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿಷಯಗಳಲ್ಲಿ ವಿದ್ಯಾರ್ಹತೆ, ಮತ್ತು ಅನುಭವವನ್ನು ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
3) ಮೇಲೆ ನಮೂದಿಸಿರುವ ಹುದ್ದೆಗಳಿಗೆ ಕಂಪ್ಯೂಟರ್ ಜ್ಞಾನ ಅತ್ಯಾವಶ್ಯಕ ಹಾಗೂ ಕನ್ನಡ ಭಾಷೆ ಓದಲು ಬರೆಯುವ ಜ್ಞಾನ ಅತ್ಯಾವಶ್ಯಕವಾಗಿದೆ.

V) **ಅರ್ಜಿ ನಮೂನೆ ಮತ್ತು ಅರ್ಜಿ ಶುಲ್ಕ:**

(ಅ) ಅರ್ಹ ಅಭ್ಯರ್ಥಿಗಳು ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ (Website : **http://www.kslu.ac.in**) ಡೌನ್‌ಲೋಡ್ ಮಾಡಿಕೊಳ್ಳಬಹುದು.

(ಆ) ಅರ್ಜಿ ಶುಲ್ಕವನ್ನು ಡಿ.ಡಿ ಮುಖಾಂತರ **ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ** ಇವರ ಹೆಸರಿಗೆ ಸಂದಾಯವಾಗುವಂತೆ ಸಾಮಾನ್ಯ ಹಾಗೂ ಇತರೆ ಹಿಂದುಳಿದ ಜಾತಿ ಮತ್ತು ವರ್ಗಗಳು ಅಂದರೆ ಪ್ರವರ್ಗ 2ಎ, 2ಬಿ, 3ಎ, 3ಬಿ, ಮಾಜಿ ಸೈನಿಕರು ಅಭ್ಯರ್ಥಿಗಳಾದಲ್ಲಿ ಅರ್ಜಿ ಶುಲ್ಕವನ್ನಾಗಿ ರೂ.500/– (ರೂಪಾಯಿ ಐದುನೂರು ಮಾತ್ರ) ಗಳೊಂದಿಗೆ ಮತ್ತು ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ, ಮತ್ತು ಪ್ರವರ್ಗ – 1 ರ ಅಭ್ಯರ್ಥಿಗಳಾದಲ್ಲಿ ರೂ.250/– (ರೂಪಾಯಿ ಇನ್ನೂರಾ ಐವತ್ತು ಮಾತ್ರ) ಗಳೊಂದಿಗೆ (ಅರ್ಜಿ ಶುಲ್ಕ ಹಿಂತಿರುಗಿಸುವುದಿಲ್ಲ) ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ–580025 ಇವರ ಹೆಸರಿಗೆ ಅರ್ಜಿ ಜೊತೆ ಡಿ.ಡಿ, ಆಯಾ ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆಯ ಮೂಲ ಅಂಕಪಟ್ಟಿಗಳ ಧೃಡಿಕೃತ ನಕಲು ಪ್ರತಿಗಳೊಂದಿಗೆ ಸಲ್ಲಿಸಬೇಕು.

VI) **ಸಾಮಾನ್ಯ ಮಾಹಿತಿಗಳು ಹಾಗೂ ಸೂಚನೆಗಳು :**

(1) ಡಿ.ಡಿ ಇರದ ಹಾಗೂ ನಿಗದಿಪಡಿಸಿದ ಪ್ರಮಾಣ ಪತ್ರಗಳ ಪ್ರತಿಗಳು ಮತ್ತು ಸಂಬಂಧಿಸಿದ ದಾಖಲೆಗಳಿಲ್ಲದೇ ಬಂದ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವದು.

(2) ಪ್ರತಿ ಹುದ್ದೆಗೆ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದು ಹಾಗೂ ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಿದಲ್ಲಿ ಮೊದಲನೇ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು ಹಾಗೂ ಇನ್ನುಳಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(3) ಅಭ್ಯರ್ಥಿಗಳು ಅರ್ಜಿಯೊಂದಿಗೆ ಚಾಲ್ತಿಯಲ್ಲಿರುವ ಈ ಕೆಳಗೆ ಸೂಚಿಸಲಾಗಿರುವ ದಾಖಲೆಗಳನ್ನು ಲಗತ್ತಿಸಬೇಕು.

- ➢ ಹುಟ್ಟಿದ ತಾರೀಖಿಗೆ ಆಧಾರದ ದಾಖಲೆ ಪ್ರತಿ,
- ➢ ಹುದ್ದೆಗೆ ಸೂಚಿಸಲಾಗಿರುವ ವಿದ್ಯಾರ್ಹತೆಗಳಿಗೆ ಸಂಬಂಧಿಸಿದ ಧೃಡಿಕೃತ ಅಂಕಪಟ್ಟಿಗಳ ನಕಲು ಪ್ರತಿಗಳು,
- ➢ ಆಯಾ ಹುದ್ದೆಗಳಿಗೆ ಸಂಬಂದಿಸಿದಂತೆ ಹೊಂದಿರುವ ಸೇವಾ ಅನುಭವ ಪತ್ರಗಳು,
- ➢ ಜಾತಿ ಪ್ರಮಾಣ ಪತ್ರ,

- 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮ/ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಡೀಕರಣ ಪತ್ರ
- ಅಂಗವಿಕಲತೆ ಹೊಂದಿದ್ದರೆ ಜಿಲ್ಲಾ ಆಸ್ಪತ್ರೆ ವೈದ್ಯಾಧಿಕಾರಿಯಿಂದ ಪಡೆದ ಪ್ರಮಾಣ ಪತ್ರ ಹಾಗೂ
- ಮಾಜಿ ಸೈನಿಕರ ದೃಡೀಕೃತ ಪ್ರಮಾಣ ಪತ್ರ.

(4) **ಪ್ರತ್ಯೇಕ ಹುದ್ದೆಗಳಿಗೆ ಬೇರೆ ಬೇರೆ ಅರ್ಜಿಗಳನ್ನು ಸಲ್ಲಿಸಬೇಕು.**

(5) ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು ಹಾಗೂ ಸೇವೆಗೆ ಸೇರಿಕೊಳ್ಳುವ ಸಮಯ ಅಥವಾ ಇನ್ನಾವುದೋ ಸಂದರ್ಭದಲ್ಲಾದರೂ ಕ.ರಾ.ಕಾ.ವಿ.ಯ ವತಿಯಿಂದ ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ.

(6) ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ 20/07/2012 ರಂದು ಮಧ್ಯಾಹ್ನ 5.30 ಗಂಟೆಯ ಒಳಗೆ ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ –580025, ಇವರಿಗೆ ತಲುಪುವಂತೆ ಕಳುಹಿಸಬೇಕು. ಆ ದಿನ ನಿಗದಿತ ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

(7) ಅರ್ಜಿದಾರರು ಅಂತಿಮ ದಿನಾಂಕದವರೆಗೆ ಕಾಯದೇ ಆದಷ್ಟು ಮುಂಚಿತವಾಗಿ ಅರ್ಜಿಗಳನ್ನು ಕಳುಹಿಸಬೇಕು. ಅಂಚೆಯಿಂದ ಉಂಟಾಗಬಹುದಾದ ವಿಳಂಬಗಳಿಗೆ ವಿಶ್ವವಿದ್ಯಾಲಯವು ಜವಾಬ್ದಾರವಲ್ಲ.

(8) ಜಾಹೀರಾತು ಮಾಡಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

ಆದೇಶದ ಮೇರೆಗೆ,

ಸಹಿ

**ಕುಲಸಚಿವರು**